ಕಾರ್ಯಕ್ರಮ ಮುಗಿದ ನಂತರ, ಚಂದ್ರ ನನ್ನ ಬಳಿ ಬಂದು ಹೇಳಿದ, 'ನಾನು ನಿಮ್ಮ ಕವನ, ಕಾದಂಬರಿಗಳನ್ನೆಲ್ಲ ಓದಿಕೊಂಡಿದ್ದೇನೆ, ಸಾರ್. ನನ್ನ ಮೆಚ್ಚಿನ ಲೇಖಕರಲ್ಲಿ ನೀವೂ ಒಬ್ಬರು. ನಾನು ಸಂತೋಷ, ಹೆಮ್ಮೆ ಒತ್ತಿಟ್ಟು, ಬಿಗುಮಾನದಿಂದ 'ಥ್ಯಾಂಕ್ಸ್' ಎಂದೆ. 'ನಿಮ್ಮ ಕೆಲವು ಕೃತಿಗಳನ್ನು ನಾನು ತೆಲುಗಿಗೆ ಅನುವಾದ ಮಾಡಬೇಕೆಂದಿದ್ದೇನೆ. ದಯವಿಟ್ಟು ಅನುಮತಿ ಕೊಡುತ್ತೀರಾ?' ಕೇಳಿದ. 'ಆಗಲಿ, ಅದಕ್ಕೇನಂತೆ' ಎಂದೆ. 'ನಿಮ್ಮ ವಿಳಾಸ ಬೇಕಿತ್ತು' ಎಂದ. ಬಸವನಗುಡಿಯ ನನ್ನ ಮನೆಯ ವಿಳಾಸ ಹೇಳಿದೆ. 'ನನ್ನ ಮನೆಯೂ ಅದೇ ಏರಿಯಾದಲ್ಲಿದೆ, ಸಾರ್. ನಾಳೆ ಸಂಜೆ ನಿಮ್ಮ ಮನೆಯಲ್ಲಿ ನಿಮ್ಮನ್ನು ಕಾಣಬಹುದ?' ಕೇಳಿದ. 'ಅಗತ್ಯವಾಗಿ' ಎಂದು ಕೈಕುಲುಕಿದೆ.

★★★

ಅಂದಿನಿಂದ ಚಂದ್ರನೊಂದಿಗೆ ನನ್ನ ಪರಿಚಯ, ಸ್ನೇಹ ಕುದುರತೊಡಗಿತು. ಅವನು ಕೆಲವೊಮ್ಮೆ ತನ್ನ ಗೆಳೆಯ ಸುರೇಶನೊಂದಿಗೆ, ಬಹುಪಾಲು ಒಬ್ಬಂಟಿಯಾಗಿ ನನ್ನ ಮನೆಗೆ ಬಂದು ನನ್ನನ್ನು ಕಾಣತೊಡಗಿದ. ತಾನು ಅನುವಾದಿಸಿ, ತೆಲುಗು ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ನನ್ನ ಕಥೆ ಕವನಗಳ ಪ್ರತಿಗಳನ್ನು ತಂದು ಕೊಡುತ್ತಿದ್ದ. ಓದಿ ತೋರಿಸುತ್ತಿದ್ದ. ಕೆಲವೊಮ್ಮೆ 'ವಿಶೇಷ ಊಟ', 'ಪಾನಕೂಟ'ಕ್ಕೆಂದು ತನ್ನ ಮನೆಗೂ ನನ್ನನ್ನು ಕರೆದೊಯ್ಯುತ್ತಿದ್ದ. ಅವಿವಾಹಿತನಾಗಿದ್ದ ಅವನು ಮತ್ತು ಅವನ ಗೆಳೆಯ ಸುರೇಶ ಒಂದು ಮನೆ ಬಾಡಿಗೆಗೆ ಹಿಡಿದು, ಅಡಿಗೆ ಮನೆಗೆಲಸಕ್ಕೆ ಒಬ್ಬನನ್ನು ನೇಮಿಸಿಕೊಂಡಿದ್ದರು. ನಾವು ಸಾಮಾನ್ಯವಾಗಿ ಸಾಹಿತ್ಯ, ಸಮಾಜ, ರಾಜಕೀಯ ಇತ್ಯಾದಿ ಚರ್ಚಿಸುತ್ತಿದ್ದೆವು. 'ಸೂಕ್ಷ್ಮಗ್ರಾಹಿ, ಚೆನ್ನಾಗಿ ಓದಿಕೊಂಡಿದ್ದಾನೆ, ಆದರೆ ತುಂಬಾ ಭಾವುಕ' ಅನ್ನಿಸಿತ್ತು.

ಅವನ ಸ್ವಂತದ ಬಗ್ಗೆ ತಿಳಿಯುತ್ತಾ ಹೋದೆ. ಅವನ ಹುಟ್ಟೂರು ಹೈದರಾಬಾದಿನ ಹತ್ತಿರ ಒಂದು ಹಳ್ಳಿ. ಹೆಸರು 'ನಲ್ಲರಾಳ್ಳ ಕೊಂಡ' ಅವನ ತಂದೆ ಜಗ್ಗಯ್ಯರೆಡ್ಡಿ ಅಲ್ಲಿಗೆ ಜಮೀನ್ದಾರ. ಸಾಕಷ್ಟು ಹಣ, ಜಮೀನು, ಅಧಿಕಾರ ಜಬರದಸ್ತು. ಆತನಿಗೆ ಇಬ್ಬರು ಮಕ್ಕಳು. ಮೊದಲನೆಯವಳು ಅನ್ನಪೂರ್ಣೇಶ್ವರಿ, ಎರಡನೆಯವನು ಈ ಚಂದ್ರಕಾಂತ. ಇವನಿಗೂ ಇವನ ಅಕ್ಕನಿಗೂ ನಡುವೆ ಸುಮಾರು ಹನ್ನೆರಡು ವರ್ಷಗಳ ಅಂತರ.

ಚಂದ್ರನಿಗೆ ಐದು ವರ್ಷ ಆಗಿದ್ದಾಗ ಅವನ ತಾಯಿ ತೀರಿಕೊಂಡಳು. ನಂತರ ಅವನ ತಂದೆ ಮತ್ತೆ ಮದುವೆಯಾಗಲಿಲ್ಲ, ಚಂದ್ರನ ಅಕ್ಕ ಮದುವೆಯಾಗಿ ಹೈದರಾಬಾದಿನಲ್ಲಿದ್ದಳು. ಚಂದ್ರನನ್ನು ಅವಳ ಮನೆಯಲ್ಲೇ ಬಿಟ್ಟು, ಓದಿಸಿ, ಬೆಳೆಸಿದ. ಹಳ್ಳಿಯ ಮನೆಯಲ್ಲಿ ತಾನು ಒಬ್ಬಂಟಿಯಾಗಿ ಉಳಿದ. ಅಡಿಗೆ, ಮನೆಗೆಲಸ, ದನ, ಕುರಿ, ಕೋಳಿ ಇತ್ಯಾದಿ ನೋಡಿಕೊಳ್ಳಲು ಮನೆತುಂಬ ಹಲವು ಹೆಣ್ಣಾಳು ಗಂಡಾಳು ಇದ್ದರು. ತಿಂಗಳಿಗೊಮ್ಮೆ ಹೈದಾರಾಬಾದಿಗೆ ಬಂದು, ಒಂದೆರಡು ದಿನ ಮಗಳು ಮಗನೊಂದಿಗಿದ್ದು ಹೋಗುತ್ತಿದ್ದ. ರಜೆಯ ದಿನಗಳಲ್ಲಿ ಚಂದ್ರ ತನ್ನ ಹುಟ್ಟೂರಿಗೆ ಹೋಗಿ, ಕೆಲವು ದಿನ ಇದ್ದು ಬರುತ್ತಿದ್ದುದೆಷ್ಟೋ ಅಷ್ಟೇ. ಯಾಕೋ ಜಗ್ಗಯ್ಯರೆಡ್ಡಿಗೆ ತನ್ನ ಮಗ ತನ್ನ ಹಳ್ಳಿಗೆ ಬಂದು ಇರುವುದು ಅಷ್ಟಾಗಿ ಸೇರುತ್ತಿರಲಿಲ್ಲ. 'ಈ ಹಳ್ಳಿಯಲ್ಲಿದ್ದರೆ ಹಾಳಾಗಿ ಬಿಡ್ತೀಯ' ಅನ್ನುತ್ತಿದ್ದ. ಚಂದ್ರನಿಗೆ ಮಾತ್ರ ತನ್ನ ಹಳ್ಳಿಯ ಬಗ್ಗೆ ಸಹಜ ಪ್ರೀತಿ ಉಳಿದು ಕೊಂಡಿತ್ತು.

ಚಂದ್ರ ಎಂ.ಎ. ಓದುತ್ತಿದ್ದ ಕಾಲಕ್ಕಾಗಲೇ ಸಹವಾಸ ದೋಷದಿಂದ 'ಬಂಡಾಯಗಾರ'